**ದಿಃ30.01.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ.ಕೆ.ಡಿ.ಡಿ ವಕೀಲರಿಂದ ಃ**

ಅಪಘಾತ ಕಾಲಕ್ಕೆ ನಾನು ಮನೆಯಲ್ಲಿ ಇದ್ದೆ. ಅಪಘಾತ ಕಾಲಕ್ಕೆ ಬುಲೆರೊ ವಾಹನ ನೋಂದಣಿ ಸಂಖ್ಯೆ ಕೆಎ12ಪಿ9979 ನ್ನು ನನ್ನ ಮಗ ಚಾಲನೆ ಮಾಡುತ್ತಿದ್ದ. ನನ್ನ ಮಗನಿಗೆ ವಾಹನ ಚಾಲನೆ ಮಾಡಲು ಚಾಲನಾ ಪರವಾನಿಗೆ ಪತ್ರ ಇತ್ತು. ಸದರಿ ಚಾಲನಾ ಪರವಾನಿಗೆ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿದ್ದೇನೆ. ನಿಮ್ಮ ಮಗನಿಗೆ ಸಂಬಂಧಿಸಿದ ಚಾಲನಾ ಪರವಾನಿಗೆ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ಸದರಿಯವರಿಗೆ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಹಾಗಾಗಿ ಅದನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತ ದಿಃ28.12.2023 ರಂದು ಸಂಜೆ 5.00 ಗಂಟೆಗೆ ಸಂಭವಿಸಿದೆ. ನಾನು ಅಪಘಾತವನ್ನು ಖುದ್ದು ನೋಡದೆ ಇರುವುದರಿಂದ ಅಪಘಾತ ಹೇಗೆ ಸಂಭವಿಸಿದೆ ಎಂದು ನನಗೆ ಹೇಳಲು ಸಾಧ್ಯವಿಲ್ಲ ಎಂದರೆ ಸಾಕ್ಷಿ ನನ್ನ ಮಗ ಅಪಘಾತ ಹೇಗೆ ಸಂಭವಿಸಿದೆ ಎಂದು ಮಾಹಿತಿ ಕೊಟ್ಟಿದ್ದಾರೆ ಎನ್ನುತ್ತಾರೆ. ಈ ಅಪಘಾತ ನನ್ನ ಮಗನ ತಪ್ಪಿನಿಂದಾಗಿ ಸಂಭವಿಸಿದೆ ಎಂದರೆ ಸರಿಯಲ್ಲ. ಈ ಅಪಘಾತಕ್ಕೆ 1ನೇ ಎದುರುದಾರಳು ಯಾವುದೇ ರೀತಿಯಲ್ಲಿ ಕಾರಣರಲ್ಲ ಎಂದರೆ ಸರಿಯಲ್ಲ. ಈ ಅಪಘಾತ ನನ್ನ ಮಗನ ಅತೀ ವೇಗ ಮತ್ತು ಅಜಾಗರೂಕತೆಯ

ಚಾಲನೆಯಿಂದ ಸಂಭವಿಸಿದೆ ಎಂದರೆ ಸರಿಯಲ್ಲ. ನಿಮ್ಮ ಬುಲೆರೊ ವಾಹನ ಯಾವ ಮಾಡಲ್ ಎಂದರೆ ಸಾಕ್ಷಿ ಅದನ್ನು ಖರೀದಿ ಮಾಡಿ 12 ವರ್ಷ ಆಗಿದೆ ಎನ್ನುತ್ತಾರೆ. ನಾನು ಬುಲೆರೊ ವಾಹನವನ್ನು ಶೋರೂಮ್ ನಿಂದ 2013 ರಲ್ಲಿ ಖರೀದಿ ಮಾಡಿದ್ದೇನೆ. ನೀವು ಕೊನೆಯ ಭಾರಿಗೆ ಅಪಘಾತ ಪೂರ್ವದಲ್ಲಿ ಯಾವಾಗ ಸರ್ವಿಸ್ ಮಾಡಿಸಿದೀರಿ ಎಂದರೆ ಸಾಕ್ಷಿ 2022 ರಲ್ಲಿ ಸರ್ವಿಸ್ ಮಾಡಿಸಿದ್ದೆ ಎನ್ನುತ್ತಾರೆ. ಈ ಸಂಬಂಧ ನ್ಯಾಯಾಲಯದ ಮುಂದೆ ದಾಖಲೆ ಹಾಜರು ಮಾಡಿಲ್ಲ. ಸಾಕ್ಷಿ ಮುಂದುವರೆದು ವಾಹದ ಸಾಮಾನ್ಯ ಸರ್ವಿಸ್ ಮಾಡಿಸಿದ್ದೆ ಎನ್ನುತ್ತಾರೆ. ಬುಲೆರೊ ವಾಹನವನ್ನು ಮಹೇಂದ್ರ ಶೊರೂಮ್ ನಲ್ಲಿ ರಿಪೇರಿ ಮಾಡಿಸಿದ್ದೇನೆ. ವಾಹನವನ್ನು ರಿಪೇರಿಗೆ ಬಿಡುವ ಪೂರ್ವದಲ್ಲಿ ನನ್ನ ವಾಹನದ ವಿಮಾ ಸಂಸ್ಥೆಗೆ ಮಾಹಿತಿ ನೀಡಿದ್ದೇನೆ. ವಾಹನವನ್ನು ರಿಪೇರಿಗೆ ಬಿಡುವ ಪೂರ್ವದಲ್ಲಿ ನನ್ನ ವಾಹನದ ವಿಮಾ ಸಂಸ್ಥೆಗ ಆಗಲಿ ಅಥವಾ 2ನೇ ಎದುರುದಾರ ವಿಮಾ ಸಂಸ್ಥೆಗ ಆಗಲಿ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ರಿಪೇರಿ ಅಂದಾಜು ವೆಚ್ಚವನ್ನು ಮಾಡಿಸಿದ್ದೆ. ಸಾಕ್ಷಿ ಮುಂದುವರೆದು 3ನೇ ಎದುರುದಾರರ ಸಂಸ್ಥೆಯವರು ಸರ್ವೆ ಮಾಡಿದ್ದರು ಎನ್ನುತ್ತಾರೆ. ಆ ರೀತಿ ಸರ್ವೆ ವರದಿಯನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮಹೇಂದ್ರ ಶೋರೂಮ್ ರವರು ಸಹ ರಿಪೇರಿಯ ಅಂದಾಜು ವೆಚ್ಚವನ್ನು ತಯಾರಿಸಿದ್ದರು ಎನ್ನುತ್ತಾರೆ. ವಾಹನ ತಪಾಸಣಾ ವರದಿ

ಪ್ರಕಾರ ನನ್ನ ಬುಲೆರೊ ವಾಹನದ ಹಿಂಭದಿಯ ದೀಪ ಮತ್ತು ಬಲಭಾಗದ ಹಿಂದಿನ ಬಾಡಿ ಜಕಂ ಆಗಿತ್ತು ಎಂದು ನಮೂದು ಇದೆ ಎಂದರೆ ಸರಿ. ನಿಪಿ.13 ಮತ್ತು 14 ರಲ್ಲಿ ನಮೂದಿಸಿರುವ ಬಿಡಿಭಾಗಗಳು ಅಪಘಾತದಲ್ಲಿ ಸಂಭವಿಸಿದ ಜಕಂಗೆ ಸಂಬಂಧಿಸಿದ್ದವು ಅಲ್ಲ ಎಂದರೆ ಸರಿಯಲ್ಲ. ನಿಪಿ.13 ಮತ್ತು 14 ರಲ್ಲಿ ತೋರಿಸಿರುವ ರಿಪೇರಿ ಅಪಘಾತದಲ್ಲಾದ ಜಕಂಗಳ ಸಂಬಂಧ ಅಲ್ಲ ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ಅಪಘಾತ ಪೂರ್ವದಲ್ಲಿ ಆಗಿದ್ದ ಜಕಂಗಳನ್ನು ಈ ಅಪಘಾತದ ಜಕಂಗಳು ಎಂದು ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಹಾಜರು ಮಾಡಿರುವ ರಿಪೇರಿ ವೆಚ್ಚದಲ್ಲಿ ಸವಕಳಿ ವೆಚ್ಚವನ್ನು ಕಳೆದಿಲ್ಲ. ಹೆಚ್ಚಿನ ಪರಿಹಾರ ಪಡೆಯಬೇಕೆಂ ಉದ್ದೇಶದಿಂದ ನ್ಯಾಯಾಲಯದ ಮುಂದೆ ಹಾಜರು ಮಾಡಿರುವ ಬಿಲ್ಲುಗಳನ್ನು ಸೃಷ್ಟಿಮಾಡಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ನನ್ನ ಬುಲೆರೊ ವಾಹನ ವಿಮೆಗೆ ಒಳಪಟ್ಟಿತ್ತು. ನನ್ನ ವಾಹನದ ವಿಮಾ ಸಂಸ್ಥೆಯಿಂದ ಒಟ್ಟು 48,500/- ರೂಗಳನ್ನು ಪರಿಹಾರವಾಗಿ ವಾಹನ ಜಕಂ ಸಂಬಂಧ ಪಡೆದಿದ್ದೇನೆ. ಸಾಕ್ಷಿ ಮುಂದುವರೆದು ಒಟ್ಟು 82 ಸಾವಿರದ ಚಿಲ್ಲರೆ ಖರ್ಚಾಗಿತ್ತು ಅದರಲ್ಲಿ ನನ್ನ ವಾಹನದ ವಿಮಾ ಸಂಸ್ಥೆ 48,500/- ರೂ ಮಾತ್ರ ಕೊಟ್ಟಿದ್ದು ಹೆಚ್ಚುವರಿ ಪರಿಹಾರವನ್ನು ಅಪಾಧಿತ ವಾಹನದ ವಿಮಾ ಸಂಸ್ಥೆಯಿಂದ ಕೇಳುತ್ತಿದ್ದೇನೆ ಎನ್ನುತ್ತಾರೆ. ಸವಕಳಿ ವೆಚ್ಚವನ್ನು ಪರಿಗಣಿಸಿ ನನ್ನ ವಾಹನದ ವಿಮಾ

ಸಂಸ್ಥೆ ನನಗೆ ಬರಬೇಕಾದ ಪರಿಹಾರವನ್ನು ಈಗಾಗಲೇ ಪಾವತಿ ಮಾಡಿರುವುದರಿಂದ 2ನೇ ಎದುರುದಾರರ ಸಂಸ್ಥೆಯಿಂದ ಹೆಚ್ಚುವರಿಯಾಗಿ ನಾನು ಯಾವುದೇ ಪರಿಹಾರ ಕೇಳಲು ಅರ್ಹನಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ದಾಖಲೆ ಹಾಜರು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾಹನದ ವಿಮಾ ಸಂಸ್ಥೆ ಭಾಕಿ ಖರ್ಚನ್ನು ಅಪಾಧಿತ ವಾಹದ ವಿಮಾ ಸಂಸ್ಥೆಯಿಂದ ಪಡೆಯತಕ್ಕದ್ದು ಎಂದು ಯಾವುದೇ ಹಿಂಭರಹ ಕೊಟ್ಟಿಲ್ಲ. ನನ್ನ ವಾಹನದ ವಿಮಾ ಸಂಸ್ಥೆ ವಾಸ್ತವ ಖರ್ಚನ್ನು ಪರಿಹಾರ ರೂಪದಲ್ಲಿ ಕೊಟ್ಟಿದ್ದು ಹೆಚ್ಚಿನ ಪರಿಹಾರ ಹಣಕ್ಕೆ ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.